ಅ.ದಾ.ನಂ.33/2020
ಪಿ.ಡಬ್ಲ್ಯು-1

ದಿನಾಂಕ: 04.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿಸವಾಲು : ಶ್ರೀ. ಎಸ್.ಪಿ.ಪಿ. ವಕೀಲರಿಂದ **1 & 5** ನೇ ಪ್ರತಿವಾದಿ ಪರವಾಗಿ.</u>

ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ಈ ದಾವೆ ಮಾಡಲು ನಾನೊಬ್ಬಳೆ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ. ದಾವಾ ಸರ್ವೆ ನಂ. 76 ಇದ್ದು, ಅದರ ವಿಸ್ತೀರ್ಣ 6 ಎಕರೆ ಚಿಲ್ಲರೆ ಜಮೀನು ಇರುತ್ತದೆ. ಈ ದಾವೆ ಮಾಡುವಾಗ ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಜಮೀನು ಇತ್ತು. ಈ ದಾವೆ ಮಾಡುವ ಸಮಯದಲ್ಲಿ ನನ್ನ ತಂದೆಯ ಹೆಸರಿನಲ್ಲಿ 4 ಎಕರೆ 19 ಗುಂಟೆ ಜಮೀನು ಮಾತ್ರ ಇತ್ತು ಎಂದರೆ ಸರಿ. ಉಳಿದ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ಸರಿ. ಸದರಿ ಮಾರಾಟವಾದ ಜಮೀನಿನಲ್ಲಿ ನಾನಾಗಲಿ ನನ್ನ ತಂದೆ-ತಾಯಿಯಾಗಲಿ ಕಬ್ಜೆ ವಹಿವಾಟಿಯಲ್ಲಿ ಇಲ್ಲ ಎಂದರೆ ಸರಿ. ಸದರಿ ಜಮೀನಿನ ಕಬ್ಜೆಯಲ್ಲಿ 6 & 7 ನೇ ಪ್ರತಿವಾದಿಯರು ಇರುತ್ತಾರೆಂದರೆ ಸರಿ. ದಾವಾ ಜಮೀನಿನ ಪೈಕಿ 2 ಎಕರೆ ಜಮೀನನ್ನು 2016 ರಲ್ಲಿ ನನ್ನ ತಂದೆ-ತಾಯಿ ಕೂಡಿಕೊಂಡು 6 & 7 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ. 2 ನೇ ಪ್ರತಿವಾದಿ ನನ್ನ ತಾಯಿ. 2 ನೇ ಪ್ರತಿವಾದಿ ನನ್ನ ತಂದೆಯ ಮೊದಲನೇಯ ಹೆಂಡತಿ ಎಂದರೆ ಸರಿ. 5 ನೇ ಪ್ರತಿವಾದಿ ನನ್ನ ತಂದೆಯ 2 ನೇ ಹೆಂಡತಿ ಎಂದರೆ ಸರಿ. ನನ್ನ ತಂದೆ ಮತ್ತು 2 ನೇ ಪ್ರತಿವಾದಿಯ ದಾಂಪತ್ಯ ಜೀವನದಿಂದ ನಾನು, 3 & 4 ನೇ ಪ್ರತಿವಾದಿಯರು ಜನಿಸಿರುತ್ತೇವೆಂದರೆ ಸರಿ. 5 ನೇ ಪ್ರತಿವಾದಿಗೆ, ಮಹಾದೇವಿ, ಮಹಾನಂದ ಮತ್ತು ಶ್ರೀಶೈಲ ಅಂತ ಮಕ್ಕಳು ಇದ್ದಾರೆಂದರೆ ಸರಿ. ಈ ದಾವೆಯ ಪೂರ್ವದಲ್ಲಿ ಮಹಾನಂದ ಮೃತಪಟ್ಟಿರುತ್ತಾಳೆಂದರೆ ಸರಿ. ಆಕೆಯ ಗಂಡನ ಹೆಸರು ಸೋಮಲಿಂಗ ಮರನೂರ ಎಂದರೆ ಸರಿ. ಈ ದಾವೆಯಲ್ಲಿ 5 ನೇ ಪ್ರತಿವಾದಿಯ ಮಕ್ಕಳ ಮತ್ತು ಅವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಾನು ಸಲ್ಲಿಸಿದ ವಂಶಾವಳಿ ತಪ್ಪು ಇರುತ್ತದೆ ಎಂದರೆ ಸರಿ. ಆ ಕಾರಣದಿಂದ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಮಹಾದೇವಿ ಮತ್ತು ಮಹಾನಂದಾ ಇವರ ಮದುವೆ ಖರ್ಚನ್ನು ನನ್ನ ತಂದೆಯೇ ಮಾಡಿರುತ್ತಾರೆ. ಸದರಿ ಮದುವೆ ಖರ್ಚಿಗಾಗಿ ಮಾಡಿದ ಸಾಲದ ತಿರುವಳಿಗಾಗಿ 2 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ಆದರೆ ನನ್ನ ಮದುವೆಯ ಖರ್ಚಿಗಾಗಿ ಮಾರಾಟ ಮಾಡಿಲ್ಲವೆಂದು ನುಡಿಯುವರು. ನನಗೆ ಈ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಅವಶ್ಯಕ ಪಕ್ಷಗಾರರನ್ನು ಈ ದಾವೆಯಲ್ಲಿ ಸೇರಿಸದೇ ಖೊಟ್ಟಿ ದಾವೆ ಮಾಡಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿರುವ ದಾವಾ

අ.ದಾ.ನಂ.33/2020
ಪಿ.ಡಬ್ಲ್ಯು-1

ಆಸ್ತಿಯಲ್ಲಿ 5 ನೇ ಪ್ರತಿವಾದಿಯ ಮಕ್ಕಳ ಮತ್ತು ಅವರ ವಾರಸುದಾರರಿಗೆ ಸಮಪಾಲು ಇದೆ ಎಂದರೆ ಸರಿ. 5 ನೇ ಪ್ರತಿವಾದಿಯ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡುತ್ತೀರೋ ಹೇಗೋ ಎಂಬ ಪ್ರಶ್ನೆಗೆ ಸಾಕ್ಷಿ ಅವರನ್ನು ಪಕ್ಷಗಾರರನ್ನಾಗಿ ಮಾಡುತ್ತೇನೆಂದು ನುಡಿಯುವರು. ದಾವಾ ಆಸ್ತಿಯ ನನ್ನ ತಂದೆಯ ಪಿತ್ರಾರ್ಜಿತ ಆಸ್ತಿ ಇರುತ್ತದೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ಅಜ್ಜನ ಹೆಸರು ಮಲ್ಲಪ್ಪ ಇದ್ದು, ಆತನ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾನು ಮಾಡಿದ ದಾವೆ ಖೊಟ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ.

ದಾವಾ ಜಮೀನಿನಲ್ಲಿ ನನಗೆ ಪಾಲು ಕೊಡುವಂತೆ ನಾನು 2016 ರಲ್ಲಿ ಹಿರಿಯರ ಮೂಲಕ ಕೇಳಿರುತ್ತೇನೆ. ಹಾಗೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಜಮೀನಿನ ಈಗಿನ ಕಿಮ್ಮತ್ತು ನನಗೆ ಗೊತ್ತಿಲ್ಲ. ದಾವಾ ಜಮೀನು 2020 ರಲ್ಲಿ ಪ್ರತಿ ಎಕರೆಗೆ 15 ಲಕ್ಷ ಕಿಮ್ಮತ್ತು ಎಂದರೆ ಸರಿ. ಈಗ 5-6 ವರ್ಷಗಳ ಹಿಂದೆ ಜಮೀನಿನ ಅಕ್ಕ-ಪಕ್ಕದಲ್ಲಿ ಕೇನಾಲ್ ಹಾಯ್ದು ಹೋಗಿದೆ ಎಂದರೆ ಸರಿ. ಈಗ ಸದರಿ ದಾವಾ ಜಮೀನು ಅಂದಾಜು 75-80 ಲಕ್ಷ ರೂಪಾಯಿ ಕಿಮ್ಮತ್ತು ಆಗುತ್ತದೆ ಎಂದರೆ ಇರಬಹುದು. ಆ ಕಾರಣದಿಂದ ಈ ದಾವೆಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿ ಈ ದಾವೆಯಲ್ಲಿ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ನಾವೆಲ್ಲರೂ ಮಿಲಾಪೆಯಾಗಿ 1 & 5 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಖೊಟ್ಟಿ ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮುಂದುವರೆದ ಪಾಟಿಸವಾಲಿಗೆ ಸಮಯ ಕೊರಿದ್ದು, ಕೊರಿಕೆಯಂತೆ ಮುಂದೂಡಿದೆ.

[ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.]

ಓ.ಹೇ.ಕೇ.ಸರಿ ಇದೆ.

ARASHAD ANSARI

Digitally signed by ARASHAD ANSARI
Date: 2025.06.04 16:08:42 +0530

ಸಹಿ/-
ಪ್ರಧಾನ ದಿವಾಣಿ ನ್ಯಾಯಾಧೀಶರು,
ಜಮಖಂಡಿ.